ಬಂದಿತು ಎನ್ನುವ ಪ್ರತೀತಿ ಇದೆ. ನೀವು ನೋಡುತ್ತಿರುವ ಪ್ರತಿಮೆ ನಿಮ್ಮಲ್ಲಿಯ ಪಾರ್ವತೀ ದೇವತೆಯಂತೆ' ಎಂದು ಹೇಳಿದಾಗ ಅಚ್ಚರಿಯಾಯಿತು.

ಈ ದೇವಾಲಯದ ಪಕ್ಕದಲ್ಲಿ ಎರಡು ದೊಡ್ಡ ಕಲ್ಲು ಬಂಡೆಗಳು ಒಂದರ ಮುಂದೆ ಇನ್ನೊಂದು 50 ಅಡಿಗಳ ದೂರದಲ್ಲಿ ಸ್ಥಾಪಿತವಾಗಿವೆ. ಪ್ರೇಮಿಗಳು ತಾವು ಬಯಸಿದ ವ್ಯಕ್ತಿಯನ್ನು ಪಡೆಯಬೇಕಾದರೆ ಒಂದು ಕಲ್ಲಿನ ಬಳಿ ನಿಂತು ತಮ್ಮ ಕಣ್ಣನ್ನು ಮುಚ್ಚಿ ಇನ್ನೊಂದು ಕಲ್ಲಿಗೆ ಹೋಗಿ ಅದಕ್ಕೆ ಕೈ ತಾಕಿಸಿದರೆ ತಮ್ಮ ಪ್ರೇಮಿ ಲಭಿಸುವ ಪ್ರತೀತಿ ಇದೆ. ಹಲವಾರು ಜಪಾನಿ ತರುಣ – ತರುಣಿಯರು ತಮ್ಮ ಕಣ್ಣು ಮುಚ್ಚಿಕೊಂಡು ಕಲ್ಲನ್ನು ಮುಟ್ಟುತ್ತಿದ್ದುದ್ದನ್ನು ನೋಡಿ ನಾವು ವಿಸ್ಮಯಗೊಂಡೆವು.

## ಮೂರು ಝರಿಯ ನೀರು

ದೇವಾಲಯದ ಪ್ರಾಂಗಣದಲ್ಲಿ ದೊಡ್ಡದಾಗಿರುವ ಜಲಪಾತ ಹಲವಾರು ಪ್ರೇಕ್ಷಕರನ್ನು ತನ್ನ ಬಳಿ ಸೆಳೆಯುತ್ತದೆ. ಈ ಜಲಪಾತ ಮೂರು ಝರಿಗಳಾಗಿ ಹರಿಯುತ್ತದೆ. ಈ ಮೂರು ಝರಿಗಳಿಂದ ಬರುವ ನೀರನ್ನು ನಾವು ಕುಡಿದರೆ ನಮ್ಮ ಮನಸ್ಸಿನ ಇಚ್ಛೆ ಈಡೇರುತ್ತದೆ ಎನ್ನುವುದು ಇಲ್ಲಿಯ ಇನ್ನೊಂದು ಪ್ರತೀತಿ. ಆದರೆ ಒಂದು ನಿಯಮವನ್ನು ಮಾಡಲಾಗಿದೆ. ಮೂರೂ ಝರಿಗಳಿಂದ ನೀರನ್ನು ಕುಡಿಯುವ ಹಾಗಿಲ್ಲ. ಕೇವಲ ದುರಾಸೆ ಇರುವ ಜನರು ಮಾತ್ರ ಈ ರೀತಿ ಮಾಡುತ್ತಾರೆ ಎಂದು ಜಪಾನಿಯರು ಹೇಳುತ್ತಾರೆ. ಹೀಗಾಗಿ ಒಂದೇ ಝರಿಯ ನೀರನ್ನು ಆಯ್ಕೆ ಮಾಡಿಕೊಳ್ಳಬೇಕು. ಹೆಚ್ಚಿನ ಆಯಸ್ಸು ಬೇಕೆನಿಸುವವರು ಮಧ್ಯದ ಝರಿಯ ನೀರನ್ನು ಕುಡಿಯಬೇಕು. ವಿದ್ಯಾಭ್ಯಾಸದಲ್ಲಿ ಯಶಸ್ಸು ಬೇಕಾದವರು ಮೊದಲನೆ ಝರಿಯಿಂದ ನೀರನ್ನು ಕುಡಿಯುತ್ತಾರೆ. ವೈವಾಹಿಕ ಜೀವನ ಅಥವಾ ಪ್ರೀತಿಯ ಜೀವನ ಚೆನ್ನಾಗಿರಬೇಕು ಎನ್ನುವವರು ಮೂರನೇ ಝರಿಯ ನೀರನ್ನು ಕುಡಿಯುತ್ತಾರೆ.

ಜಪಾನಿನ ರಾಜಮಹಾರಾಜರು ಕಾಲಾನುಕಾಲದಿಂದ ವರ್ಷಕ್ಕೊಮ್ಮೆ ಈ ದೇಗುಲಕ್ಕೆ ಬಂದು ಪ್ರಾರ್ಥನೆ ಸಲ್ಲಿಸುತ್ತಿದ್ದರು ಎಂಬ ಪ್ರತೀತಿ ಇದೆ.

ನಾವು ನೋಡಿದ ಮುಂದಿನ ದೇವಾಲಯವೇ ಕಿನ್–ಕಾ–ಕುಜಿ ಎನ್ನುವ ದೇವಾಲಯ. ಇದರ ಅರ್ಥ ಚಿನ್ನದ ಹಜಾರದ ದೇವಾಲಯ ಎಂದು. ಇದು ಝೆನ್ ಬೌದ್ಧ ಧರ್ಮದ ದೇವಾಲಯವಾಗಿದ್ದು, ಈ ದೇವಾಲಯವು ಜಪಾನಿನ ಅತ್ಯಂತ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾಗಿದೆ. ಈ ಕಟ್ಟಡವನ್ನು ಹದಿನಾಲ್ಕನೇ ಶತಮಾನದಲ್ಲಿ ಸಯೋನ್‌ಜಿ ಎನ್ನುವವನು ತನ್ನ ಮನೆಯಾಗಿ ಕಟ್ಟಿದ ಎಂದು ಹೇಳಲಾಗಿದೆ. ಆನಂತರ ಆ ಮನೆಯನ್ನು ದೇವಾಲಯವಾಗಿ ಮಾರ್ಪಾಡು ಮಾಡಲಾಯಿತು ಎನ್ನುತ್ತಾರೆ. 1950ರಲ್ಲಿ ಈ ದೇವಾಲಯದ ಅರ್ಚಕನೊಬ್ಬನು ಕುಡಿತದ ಅಮಲಿನಲ್ಲೋ ಅಥವಾ ಮತಿಭ್ರಮಣೆಯಿಂದಲೋ ಈ ದೇವಾಲಯಕ್ಕೆ ಬೆಂಕಿ ಹಚ್ಚಿದನಂತೆ. ಆನಂತರ ಈ ದೇವಾಲಯವನ್ನು ಪುನರ್‌ನಿರ್ಮಾಣ ಮಾಡಲಾಗಿದೆ. ಒಂದು ಸರೋವರದ ಮಧ್ಯದಲ್ಲಿ ಜಪಾನ್ ಹಾಗೂ ಚೀನಾದ ಪಗೋಡಾಗಳ ಶೈಲಿಯಲ್ಲಿ ಕಟ್ಟಲಾಗಿರುವ ಈ ದೇವಾಲಯದ ಮುಖ್ಯ ದೇವತೆ ಅಶಿಕಗಾ ಯೋಶಿಮಿಟ್ಸು.

1955ರಲ್ಲಿ ಪುನರ್‌ನಿರ್ಮಾಣಗೊಂಡ ಈ ದೇವಾಲಯವನ್ನು ಮರದಿಂದ ಕಟ್ಟಲಾಗಿದ್ದು ಲ್ಯಾಕರ್ ಬಳಸಲಾಗಿದೆ. ನಲವತ್ತು ಅಡಿ ಎತ್ತರವಿರುವ ಇದರ ಹೊರ ಗೋಡೆಯನ್ನು ಚಿನ್ನದ ತಗಡಿನಿಂದ ನಿರ್ಮಿಸಲಾಗಿದೆ. 1987ರಲ್ಲಿ ಕಟ್ಟಡದ ನಿರ್ಮಾಣವನ್ನು ಮುಗಿಸಲಾಯಿತು. ಈ ಕಟ್ಟಡದ ಒಳಗೆ ಭಗವಾನ್ ಬುದ್ಧನ ಚಿತಾಭಸ್ಮ ಇಡಲಾಗಿದೆ. ಒಳಗೆ ಹೋಗಲು ಯಾರನ್ನೂ ಬಿಡುವುದಿಲ್ಲ. ಮೊದಲ ಮಹಡಿಯಲ್ಲಿ ಸಭಿಕರು ಸೇರುವ ಹಜಾರ ಇದ್ದು ಇದನ್ನು ಧರ್ಮ ಮಾಳಿಗೆಯೆಂದು ಕರೆಯಲಾಗುತ್ತದೆ. ಇಲ್ಲಿ ಬೇರೆ ಬೇರೆ ದೇಶದಿಂದ ಬರುವಂತಹ ರಾಜದೂತರನ್ನು ಭೇಟಿಮಾಡಲಾಗುತ್ತಿತ್ತು. ಎರಡನೆಯ ಮಹಡಿಯಲ್ಲಿ ಕಾನನ್ ದೇವತೆಯ ಗುಡಿಯಿದೆ. ಮೂರನೆಯದರಲ್ಲಿ ವಿಶಾಲ ಹಜಾರವಿದೆ. ತಾರಸಿಯ ಮೇಲೆ ಚಿನ್ನದಿಂದ ಮಾಡಿರುವ ಫೀನಿಕ್ಸ್ ಪಕ್ಷಿಯಿದೆ. ದೇವಾಲಯದ ಆವರಣದಲ್ಲಿ ಅತ್ಯಂತ ಸುಂದರವಾದ ಉದ್ಯಾನವನವನ್ನು ನಿರ್ಮಿಸಲಾಗಿದೆ.

ಜಪಾನಿ ಉದ್ಯಾನವನದ ಶೈಲಿಯಲ್ಲಿ ನಿರ್ಮಿಸಲಾಗಿರುವ ಈ ವನದಲ್ಲಿ ನಮ್ಮ ನವಗ್ರಹಗಳಂತೆ ಕೆಲವು ಕಲ್ಲಿನ ಮೂರ್ತಿಗಳನ್ನು ಇಡಲಾಗಿದೆ. ಇದರ ಮಧ್ಯದಲ್ಲಿ ಒಂದು ಮಡಕೆಯನ್ನು ಇಡಲಾಗಿದೆ. ಭಕ್ತರು ದೂರದಿಂದ ನಿಂತು ಆ ಮಡಕೆಯೊಳಗಡೆ ಒಂದು ನಾಣ್ಯವನ್ನು ಹಾಕಿದರೆ ಅವರ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ ಎಂದು ಹೇಳಲಾಗುತ್ತದೆ. ಬರುವವರೆಲ್ಲರೂ ಮಡಕೆಗೆ ನಾಣ್ಯವನ್ನು ಎಸೆಯುತ್ತಾರೆ.

## ನೀಜೋ ಅರಮನೆ

ಈ ಎರಡು ದೇವಾಲಯಗಳನ್ನು ನೋಡಿದ ನಂತರ ನಾವು ನೀಜೋ ಅರಮನೆಯನ್ನು ನೋಡಲು ಹೊರಟೆವು. 1601ರಲ್ಲಿ ಅಂದಿನ ಜಪಾನ್‌ನ ಶೋಗನ್ ಅರಸ ಈ ಅರಮನೆಯನ್ನು ಕಟ್ಟಲು ನಿರ್ಧರಿಸಿದನಂತೆ. ಪಾಳೇಗಾರರಿಂದ ಸಂಗ್ರಹಿಸಿದ ಹಣದಿಂದ ಕಟ್ಟಲಾಗಿರುವ ಈ ಅರಮನೆಯ ನಿರ್ಮಾಣವನ್ನು 1625ರಲ್ಲಿ ಮುಗಿಸಲಾಯಿತು. ಅರಮನೆಯ ಸುತ್ತಲೂ ಎರಡು ಸುತ್ತಿನ ಕೋಟೆಯ ಗೋಡೆಯಿದೆ. ಹೊರ ಕೋಟೆಯ ಸುತ್ತಲೂ ನೀರಿನ ಆಳವಾದ ಕಂದಕವಿದೆ. ಮುಖ್ಯ ದ್ವಾರದಿಂದ ಅರಮನೆಯನ್ನು ಪ್ರವೇಶ ಮಾಡಬೇಕು.

